**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೇಂದ್ರಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿ/ ಉಪ ನೋಂದಣಾಧಿಕಾರಿಗಳನ್ನು Guided Counselling Based Compulsory Transfers/ Counselling Transfers ಮುಖಾಂತರ ವರ್ಗಾವಣೆ ಮಾಡುವ ಬಗ್ಗೆ.

*****

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಒಟ್ಟು 51 ಉಪ ನೋಂದಣಿ ಕಛೇರಿಗಳಿದ್ದು, 71 ಅಧಿಕಾರಿಗಳು ಹಾಗೂ 10 ಮಹಾನಗರ ಪಾಲಿಕೆಗಳಾದ ಬಳ್ಳಾರಿ, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರದ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿ ಒಟ್ಟು 17 ಉಪ ನೋಂದಣಿ ಕಛೇರಿಗಳಿದ್ದು, ಈ ಕಛೇರಿಗಳಲ್ಲಿ 24 ಕೇಂದ್ರಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿ/ ಉಪ ನೋಂದಣಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 95 ಅಧಿಕಾರಿಗಳ ಪೈಕಿ, 53 ಅಧಿಕಾರಿಗಳ ವಿರುದ್ಧ 160 ಇಲಾಖಾ ವಿಚಾರಣೆ/ ಕ್ರಿಮಿನಲ್ ಮೊಕದ್ದಮೆ ಬಾಕಿ ಇರುತ್ತವೆ. ಅದಲ್ಲದೇ, ಈ ಕಛೇರಿಗಳಲ್ಲಿ, ದಸ್ತಾವೇಜುಗಳನ್ನು ಅಪಮೌಲ್ಯಗೊಳಿಸಿ ನೋಂದಾಯಿಸುತ್ತಿರುವುದು ಹಾಗೂ ನೋಂದಾಯಿಸಲು ನಿಯಮಾನುಸಾರ ಬೇಕಾಗಿರುವ ಅವಶ್ಯಕ ದಾಖಲಾತಿಗಳನ್ನು ಪಡೆಯದೆ ನೋಂದಾಯಿಸಲಾಗುತ್ತಿರುವ ಬಗ್ಗೆ, ಮಹಾಲೇಖಪಾಲರ ಸುಮಾರು 1085 ಆಡಿಟ್ ಕಂಡಿಕೆಗಳಲ್ಲಿ ಉಲ್ಲೇಖಿಸಲಾಗಿದ್ದು, ಇದರಿಂದಾಗಿ ರಾಜ್ಯ ಸರ್ಕಾರಕ್ಕೆ ಸುಮಾರು ರೂ.700 ಕೋಟಿಗಳಷ್ಟು ರಾಜಸ್ವ ನಷ್ಟ/ ಸೋರಿಕೆ ಉಂಟಾಗಿರುತ್ತದೆಂದು ವರದಿ ಮಾಡಲಾಗಿರುತ್ತದೆ

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ರಾಮನಗರ ವ್ಯಾಪ್ತಿಯ ಉಪ ನೋಂದಣಿ ಕಛೇರಿಗಳಲ್ಲಿ ಅಂದಾಜು ಸರಿಸುಮಾರು ವಾರ್ಷಿಕ 6.5 ಲಕ್ಷ ದಸ್ತಾವೇಜುಗಳು

..2

ನೋಂದಣಿಯಾಗುತ್ತಿದ್ದು, ಸುಮಾರು ರೂ.13,000 ಕೋಟಿಗಳಷ್ಟು ರಾಜಸ್ವ ಸಂದಾಯವಾಗುತ್ತಿದೆ. ಹಾಗೆಯೇ, 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸರಿಸುಮಾರು ವಾರ್ಷಿಕ 3 ಲಕ್ಷ ದಸ್ತಾವೇಜುಗಳು ನೋಂದಣಿಯಾಗುತ್ತಿದ್ದು, ಸರಿಸುಮಾರು ರೂ.1,800 ಕೋಟಿಗಳಷ್ಟು ರಾಜಸ್ವ ಸಂಗ್ರಹವಾಗುತ್ತಿದೆ. ರಾಜ್ಯದಲ್ಲಿ ಸಂಗ್ರಹಣೆಯಾಗುತ್ತಿರುವ ರಾಜಸ್ವದಲ್ಲಿ ಶೇ.80ಕ್ಕೂ ಹೆಚ್ಚು ರಾಜಸ್ವ ಸದರಿ ಕಛೇರಿಗಳಿಂದ ಸಂಗ್ರಹಣೆಯಾಗುತ್ತಿದ್ದು, ಈ ಕಛೇರಿಗಳು ನಿರ್ಣಾಯಕ ಹಾಗೂ ನಾಗರೀಕರೊಂದಿಗೆ ನೇರ ಸಂಪರ್ಕ ಹೊಂದಿರುತ್ತದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ Guided Counselling Based Compulsory Transfers ಗೆ ಅರ್ಹರಿರುವ ಅಧಿಕಾರಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ದಿನಾಂಕ: 31.07.2024ರ ಅಧಿಸೂಚನೆಯಲ್ಲಿ ಆಹ್ವಾನಿಸಲಾಗಿದ್ದು, ಆದರೆ ಸದರಿ ಅಧಿಸೂಚನೆಯಲ್ಲಿ ಕೌನ್ಸಿಲಿಂಗ್ ನಡೆಸುವ ವಿಧಿ-ವಿಧಾನ, ಸಮಯ ನಿಗಧಿ, ಕಡ್ಡಾಯ ವರ್ಗಾವಣೆಗೆ ಅಧಿಕಾರಿಗಳು ಅರ್ಹರಾಗುವ ಮಾನದಂಡ ಹಾಗೂ ಇತ್ಯಾದಿ ವಿವರಗಳು ಒಳಗೊಳ್ಳದೆ ಇರುವುದರಿಂದ, ಸದರಿ ಅಧಿಸೂಚನೆಯನ್ನು ದಿನಾಂಕ: 23.09.2024 ಅಧಿಸೂಚನೆಯಲ್ಲಿ ಹಿಂಪಡೆಯಲಾಗಿರುತ್ತದೆ.

ಉಪನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರ ಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿ/ ಉಪ ನೋಂದಣಾಧಿಕಾರಿ ವೃಂದದ ಅಧಿಕಾರಿಗಳಿಗೆ Guided Counselling Based Compulsory Transfers/ Counselling Transfers ಜಾರಿಗೆ ತರಲು ಸಚಿವ ಸಂಪುಟವು ಅನುಮೋದಿಸಿರುವುದರಿಂದ, ದಿನಾಂಕ: 25.06.2024ರ ಸರ್ಕಾರಿ ನೌಕರರ ವರ್ಗಾವಣೆ ಮಾರ್ಗಸೂಚಿಗಳಿಂದ ಸದರಿ ಮೂರು ವೃಂದದ ಅಧಿಕಾರಿಗಳ ವರ್ಗಾವಣೆಗೆ ವಿನಾಯಿತಿ ನೀಡುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯನ್ನು ಕೋರಲಾಗಿ, ದಿನಾಂಕ: 14.08.2024ರ ಅನಧಿಕೃತ ಟಿಪ್ಪಣಿಯಲ್ಲಿ ವಿನಾಯಿತಿ / ಸಹಮತಿ ನೀಡಿರುತ್ತದೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ 3 ಜಿಲ್ಲೆಗಳಲ್ಲಿ ಹಾಗೂ 10 ಮಹಾನಗರ ಪಾಲಿಕೆಗಳ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಇಲಾಖೆಯ ಕೆಲವೇ ಆಯ್ದ ಕೇಂದ್ರ ಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿ/ ಉಪ ನೋಂದಣಾಧಿಕಾರಿಗಳು ದೀರ್ಘಕಾಲದ ಅವಧಿಯವರೆಗೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ, ವರ್ಗಾವಣೆಗಳಲ್ಲಿ ಸಾರ್ವಜನಿಕರ ಹಿತಕ್ಕಾಗಿ ಪಾರದರ್ಶಕತೆ

ಹಾಗೂ ಸ್ವಾಭಾವಿಕ ನ್ಯಾಯದ ದೃಷ್ಟಿಯಿಂದ, BMRDA ವ್ಯಾಪ್ತಿಯ 3 ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಕಳೆದ 8 ವರ್ಷಗಳಲ್ಲಿ 5 ವರ್ಷಗಳು ಮತ್ತು ಮೇಲ್ಪಟ್ಟ ಅವಧಿಗೆ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಕಳೆದ 5 ವರ್ಷಗಳಲ್ಲಿ 4 ವರ್ಷಗಳು ಹಾಗೂ ಮೇಲ್ಪಟ್ಟ ಅವಧಿಗೆ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿಗಳು /ಉಪ ನೋಂದಣಾಧಿಕಾರಿಗಳನ್ನು Guided Counselling Based Compulsory Transfers ಮೂಲಕ ಪಾರದರ್ಶಕವಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿ.ಎಂ.ಆರ್.ಡಿ.ಎ) ಪ್ರದೇಶದ ವ್ಯಾಪ್ತಿಯಲ್ಲಿನ 3 ಜಿಲ್ಲೆಗಳಿಂದ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಿಂದ ಬೇರೆಡೆಗೆ ವರ್ಗಾಯಿಸಲು ಹಾಗೂ ಬಿಎಂ.ಆರ್.ಡಿ.ಎ ವ್ಯಾಪ್ತಿಯ ಮತ್ತು 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕಿನ ಉಪ ನೋಂದಣಿ ಕಛೇರಿಗಳನ್ನು ಹೊರತುಪಡಿಸಿ, ಇತರೆ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರ ಸ್ಥಾನ ಸಹಾಯಕರು / ಹಿರಿಯ ಉಪ ನೋಂದಣಾಧಿಕಾರಿ / ಉಪ ನೋಂದಣಾಧಿಕಾರಿಗಳನ್ನು ಸದರಿ ಸ್ಥಳಕ್ಕೆ/ ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ಪಾರದರ್ಶಕವಾಗಿ ವರ್ಗಾವಣೆ ಮಾಡಲು, ಪ್ರತ್ಯೇಕವಾದ ಮಾರ್ಗಸೂಚಿಗಳನ್ನು ಹೊರಡಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಸಹಮತಿ/ವಿನಾಯಿತಿ ನೀಡಿರುವುದರಿಂದ ಹಾಗೂ ದಿನಾಂಕ:04/07/2024, 15/07/2024 ಮತ್ತು 05/09/2024ರಂದು ನಡೆದ ಸಚಿವ ಸಂಪುಟ ಸಭೆಗಳಲ್ಲಿ Guided Counselling Based Compulsory Transfers /Counselling Transfers ಗಳಿಗೆ ಅನುಮೋದನೆ ನೀಡಿರುವುದರಿಂದ, ಎಲ್ಲಾ ವಿವರಗಳನ್ನೊಳಗೊಂಡಂತೆ ಸಮಗ್ರವಾದ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ/24/ಎಂಎಸ್ಇ1/2024**

**ಬೆಂಗಳೂರು, ದಿನಾಂಕ: 30-09-2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ 3 ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ಕಳೆದ 8 ವರ್ಷಗಳಲ್ಲಿ 5 ವರ್ಷಗಳು ಮತ್ತು ಮೇಲ್ಪಟ್ಟ ಅವಧಿಗೆ ನೋಂದಣಾಧಿಕಾರಿಯಾಗಿ

..4

ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ 10 ಮಹಾನಗರ ಪಾಲಿಕೆಗಳಾದ ಬಳ್ಳಾರಿ, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರದ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ಕಳೆದ 5 ವರ್ಷಗಳಲ್ಲಿ 4 ವರ್ಷಗಳು ಹಾಗೂ ಮೇಲ್ಪಟ್ಟ ಅವಧಿಗೆ ನೋಂದಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿಗಳು /ಉಪ ನೋಂದಣಾಧಿಕಾರಿಗಳನ್ನು Guided Counselling Based Compulsory Transfers ಮೂಲಕ ಬೇರೆಡೆಗೆ ವರ್ಗಾಯಿಸಲು ಹಾಗೂ ಕಡ್ಡಾಯ ವರ್ಗಾವಣೆಯಿಂದ ತೆರವಾಗುವ ಹುದ್ದೆಗಳಿಗೆ ಮತ್ತು ಖಾಲಿ ಹುದ್ದೆಗಳಿಗೆ, Counselling ಮೂಲಕ ಕೆಳಕಂಡ ಮಾನದಂಡ/ ಮಾರ್ಗಸೂಚಿಗಳಿಗೆ ಒಳಪಟ್ಟು ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಆದೇಶಿಸಿದೆ.

**I. ಮಾನದಂಡ/ ಮಾರ್ಗಸೂಚಿಗಳು:-**

i. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ 3 ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ನೋಂದಣಾಧಿಕಾರಿಯಾಗಿ ಕಳೆದ 8 ವರ್ಷಗಳಲ್ಲಿ 5 ವರ್ಷಗಳು ಮತ್ತು ಮೇಲ್ಪಟ್ಟ ಅವಧಿಗೆ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಸದರಿ 3 ಜಿಲ್ಲೆಗಳ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಾಧಿಕಾರಿ ಕಛೇರಿಗಳನ್ನು ಹೊರತುಪಡಿಸಿ, ಬೇರೆ ಕಛೇರಿಗಳಿಗೆ ವರ್ಗಾಯಿಸಲು, ಇಂತಹ Guided Counselling Based Compulsory Transfers ಗೆ ಅರ್ಹರಾಗುವ ಅಧಿಕಾರಿಗಳ ಕರಡು ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸುವುದು.

ii. 10 ಮಹಾನಗರ ಪಾಲಿಕೆಗಳಾದ ಬಳ್ಳಾರಿ, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರದ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಕಳೆದ 5 ವರ್ಷಗಳಲ್ಲಿ 4 ವರ್ಷಗಳು ಹಾಗೂ ಮೇಲ್ಪಟ್ಟ ಅವಧಿಗೆ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಸದರಿ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳ ಹಾಗೂ ಬಿಎಂಆರ್‌ಡಿಎ ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಉಪ ನೋಂದಣಾಧಿಕಾರಿ ಕಛೇರಿಗಳನ್ನು ಹೊರತುಪಡಿಸಿ, ಬೇರೆ ಕಛೇರಿಗಳಿಗೆ

ವರ್ಗಾಯಿಸಲು, ಇಂತಹ Guided Counselling Based Compulsory Transfers ಗೆ ಅರ್ಹರಾಗುವ ಅಧಿಕಾರಿಗಳ ಕರಡು ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸುವುದು.

iii. ಬಿಎಂ.ಆರ್.ಡಿ.ಎ ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ಕಳೆದ 8 ವರ್ಷಗಳಲ್ಲಿ 5 ವರ್ಷಗಳು ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರ ಸ್ಥಾನ ತಾಲ್ಲೂಕಿನ ಉಪ ನೋಂದಣಿ ಕಛೇರಿಗಳಲ್ಲಿ ಕಳೆದ 5 ವರ್ಷಗಳಲ್ಲಿ 4 ವರ್ಷಗಳು ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸದೆ, ಇತರೆ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಯಾಗಿ ಹಾಗೂ ಇತರೆ ಕಛೇರಿಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಕೇಂದ್ರಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿಗಳು /ಉಪ ನೋಂದಣಾಧಿಕಾರಿಗಳು ಬಿಎಂಆರ್‌ಡಿಎ ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ, ಕಡ್ಡಾಯ ವರ್ಗಾವಣೆಯಿಂದ ತೆರವಾಗುವ ಮತ್ತು ಖಾಲಿ ಇರುವ ನೋಂದಣಾಧಿಕಾರಿಗಳ ಹುದ್ದೆಗಳೆದುರಿಗೆ ನೋಂದಣಾಧಿಕಾರಿಯಾಗಿ ವರ್ಗಾವಣೆಗೊಳ್ಳಲು, ಅರ್ಹರಾಗಿರುತ್ತಾರೆ. ಇಂತಹ Guided Counselling ಮುಖಾಂತರ ವರ್ಗಾವಣೆಗೆ ಅರ್ಹರಾಗುವ ಅಧಿಕಾರಿಗಳ ಕರಡು ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸುವುದು.

iv. ಬಿಎಂ.ಆರ್.ಡಿ.ಎ ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ಪ್ರಸ್ತುತ ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವವರು, ಕಳೆದ 8 ವರ್ಷಗಳಲ್ಲಿ 5 ವರ್ಷಗಳು ಸದರಿ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸದೆ ಇರುವ ಅಧಿಕಾರಿಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯಲ್ಲಿಯೇ ಮುಂದುವರೆಯಬಹುದು ಅಥವಾ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕಿನ ಉಪ ನೋಂದಣಿ ಕಛೇರಿಗಳನ್ನು ಹೊರತುಪಡಿಸಿ, ಬೇರೆ ಉಪ ನೋಂದಣಿ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳೆದುರಿಗೆ ನೋಂದಣಾಧಿಕಾರಿಯಾಗಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

v. 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕಿನ ಉಪ ನೋಂದಣಿ ಕಛೇರಿಗಳಲ್ಲಿ ಪ್ರಸ್ತುತ ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವವರು, ಕಳೆದ 5 ವರ್ಷಗಳಲ್ಲಿ 4 ವರ್ಷಗಳು ಸದರಿ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸದೆ ಇರುವ ಅಧಿಕಾರಿಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯಲ್ಲಿಯೇ

..6

ಮುಂದುವರೆಯಬಹುದು ಅಥವಾ ಬಿಎಂ.ಆರ್.ಡಿ.ಎ ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಉಪ ನೋಂದಣಿ ಕಛೇರಿಗಳನ್ನು ಹೊರತುಪಡಿಸಿ, ಬೇರೆ ಉಪ ನೋಂದಣಿ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

vi. ಕ್ರಮ ಸಂಖ್ಯೆ: (i) ಮತ್ತು (ii) ರಂತೆ ವರ್ಗಾವಣೆಗೊಳ್ಳುವ ಅಧಿಕಾರಿಗಳು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ 3 ಜಿಲ್ಲೆಗಳು ಮತ್ತು 10 ಮಹಾನಗರ ಪಾಲಿಕೆಗಳ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿ ಉಪ ನೋಂದಣಿ ಕಛೇರಿಗಳನ್ನು ಹೊರತುಪಡಿಸಿ, ಬೇರೆ ಕಡೆ ಖಾಲಿ ಇರುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು, ಬಾಕಿ ಇರುವ ಇಲಾಖಾ ವಿಚಾರಣೆಗಳ ಮತ್ತು ಜೇಷ್ಟತೆಯನುಸಾರ ಅಧಿಕಾರಿಗಳ ಆದ್ಯತೆ ಪಟ್ಟಿಯನ್ನು ಸಿದ್ಧಪಡಿಸುವುದು. ಉದಾಹರಣೆಗೆ: ಅತಿ ಹೆಚ್ಚು ಇಲಾಖಾ ವಿಚಾರಣೆ ಬಾಕಿ ಇರುವ ಅಧಿಕಾರಿಯು ಆದ್ಯತೆಯ ಪಟ್ಟಿಯಲ್ಲಿ ಕೊನೆಯ ಸ್ಥಾನವನ್ನು ಪಡೆಯುತ್ತಾರೆ. ಬಾಕಿ ಇರುವ ಇಲಾಖಾ ವಿಚಾರಣೆಗಳು ಸಮವಾಗಿದ್ದಲ್ಲಿ ಸೇವಾ ಜೇಷ್ಠತೆಯನುಸಾರ ಸ್ಥಾನಗಳನ್ನು ನಿಗಧಿಪಡಿಸತಕ್ಕದ್ದು.

vii. ಕ್ರಮ ಸಂಖ್ಯೆ: (iii)ರಂತೆ ಬಿಎಂ.ಆರ್.ಡಿ.ಎ ವ್ಯಾಪ್ತಿಯ 3 ಜಿಲ್ಲೆಗಳ ಉಪ ನೋಂದಣಿ ಕಛೇರಿಗಳಿಗೆ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಿಗೆ ನೋಂದಣಾಧಿಕಾರಿಗಳಾಗಿ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು, ಬಾಕಿ ಇರುವ ಇಲಾಖಾ ವಿಚಾರಣೆಗಳ ಮತ್ತು ಜೇಷ್ಟತೆಯನುಸಾರ ಅಧಿಕಾರಿಗಳ ಆದ್ಯತೆ ಪಟ್ಟಿಯನ್ನು ಸಿದ್ಧಪಡಿಸುವುದು. ಉದಾಹರಣೆಗೆ: ಯಾವುದೇ ಇಲಾಖಾ ವಿಚಾರಣೆ ಬಾಕಿ ಇಲ್ಲದಿರುವ ಅಧಿಕಾರಿಯು ಆದ್ಯತೆಯ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಪಡೆಯುತ್ತಾರೆ. ಬಾಕಿ ಇರುವ ಇಲಾಖಾ ವಿಚಾರಣೆಗಳು ಸಮವಾಗಿದ್ದಲ್ಲಿ ಸೇವಾ ಜೇಷ್ಠತೆಯನುಸಾರ ಸ್ಥಾನಗಳನ್ನು ನಿಗಧಿಪಡಿಸತಕ್ಕದ್ದು.

viii. ಕ್ರಮ ಸಂಖ್ಯೆ: (i) ಮತ್ತು (ii)ರಂತೆ Guided Counselling Based Compulsory Transfers /Counselling Transfers ಗಳಿಗೆ ಅರ್ಹರಿರುವ ಅಧಿಕಾರಿಗಳು ಕೌನ್ಸಿಲಿಂಗ್‌ಗೆ ಹಾಜರಾಗದಿದ್ದಲ್ಲಿ, ಕೌನ್ಸಿಲಿಂಗ್ ಮುಗಿದ ನಂತರ, ಪ್ರಕಟಿಸಿರುವ ಆಧ್ಯತೆಯ ಪಟ್ಟಿಯನ್ವಯ ಮತ್ತು ಖಾಲಿ ಹುದ್ದೆಗಳ ಪಟ್ಟಿಯಲ್ಲಿ Alphabetical ಆಧಾರದ ಮೇಲೆ ಜಿಲ್ಲೆಗಳಲ್ಲಿ ಉಳಿದ ಖಾಲಿ ಇರುವ ಹುದ್ದೆಗಳೆದುರಿಗೆ ವರ್ಗಾಯಿಸತಕ್ಕದ್ದು.

ix. ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಮೀಸಲಾತಿಯನ್ವಯ ನೇಮಕಾತಿ ಹೊಂದಿರುವ ಅಧಿಕಾರಿ/ನೌಕರರು, ಕಲ್ಯಾಣ ಕರ್ನಾಟಕ ಜಿಲ್ಲೆಗಳ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿ ಕಡ್ಡಾಯ ವರ್ಗಾವಣೆಯಿಂದ ತೆರವಾಗುವ ಹುದ್ದೆ ಮತ್ತು ಖಾಲಿ ಇರುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

x. **II) Guided Counselling Based Compulsory Transfers /Counselling Transfers ಗಳ ಈ ಕೆಳಕಂಡ ಪ್ರಕ್ರಿಯೆಗಳಿಗೆ ವೇಳಾಪಟ್ಟಿಯನ್ನು, ಅರ್ಹ ಅಧಿಕಾರಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸುವ ಅಧಿಸೂಚನೆಯಲ್ಲಿ ನಮೂದಿಸಲಾಗುವುದು:**

| ಕ್ರ. ಸಂ. | ವಿವರ |
|---|---|
| 1 | BMRDA ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರು ಬೇರೆಡೆಗೆ Guided Counselling Based Compulsory Transfers /Counselling Transfers ಮೂಲಕ ವರ್ಗಾವಣೆಗೊಳ್ಳಲು ಅರ್ಹರಿರುವ ಅಧಿಕಾರಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲು |
| 2 | BMRDA ವ್ಯಾಪ್ತಿಯ 3 ಜಿಲ್ಲೆಗಳಲ್ಲಿನ ಹಾಗೂ 10 ಮಹಾನಗರ ಪಾಲಿಕೆಯ ಕೇಂದ್ರಸ್ಥಾನ ತಾಲ್ಲೂಕುಗಳಲ್ಲಿನ ಉಪ ನೋಂದಣಿ ಕಛೇರಿಗಳಿಗೆ ನೋಂದಣಾಧಿಕಾರಿಗಳಾಗಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗೊಳ್ಳಲು ಅರ್ಹರಿರುವ ಅಧಿಕಾರಿಗಳ ತಾತ್ಕಾಲಿಕ ಪಟ್ಟಿ ಪ್ರಕಟಿಸಲು. |
| 3 | ಪ್ರಕಟಿಸಿರುವ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು |
| 4 | ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸಲು |
| 5 | Guided Counselling Based Compulsory Transfers /Counselling Transfers ಗಾಗಿ ಕೌನ್ಸಲಿಂಗ್ ನಡೆಸುವುದು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎಸ್.ಆರ್.ಶಿವಶಂಕರ್)**
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ನಿ., ನೋಂದಣಿ ಮತ್ತು ಮುದ್ರಾಂಕ)

30/9/24

**ಇವರಿಗೆ :**

1) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು –ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು.

2) ಉಪ ನೋಂದಣಿ ಮಹಾಪರಿವೀಕ್ಷಕರು (ಆಡಳಿತ ಮತ್ತು ಕಾನೂನು), ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.

3) ಎಲ್ಲಾ ಜಿಲ್ಲಾ ನೋಂದಣಾಧಿಕಾರಿ/ ಕೇಂದ್ರಸ್ಥಾನ ಸಹಾಯಕರು/ ಹಿರಿಯ ಉಪ ನೋಂದಣಾಧಿಕಾರಿ/ ಉಪ ನೋಂದಣಾಧಿಕಾರಿಗಳಿಗೆ – ಐಜಿಆರ್‌ರವರ ಮುಖಾಂತರ.

**ಪ್ರತಿಗಳು:**

1) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಸಾಮಾಜಿಕ ಭದ್ರತೆ, ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
3) ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.